# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ).

ನಿಗಮ ಕಾರ್ಯಾಲಯ,
CIN : U40109KA2004SGC035177
ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು-17.
Website : www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರ ಕಛೇರಿ,
ಕಾರ್ಯ ಮತ್ತು ಪಾಲನೆ ಜ್ಯೋತಿನಗರ, ಉಪ-ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ : 0821-2450020


ಕ್ರ.ಸಂ. : ಸ.ಕಾ.ನಿ.ಇಂ.(ವಿ)/ಸಲೆ/ಜ್ಯೋತಿನಗರ/17-18/ 670-74    ದಿನಾಂಕ : 02.06.18

(78)

## ಜನಸಂಪರ್ಕಸಭಾ ನಡಾವಳಿ

ದಿನಾಂಕ 25.05.2018 ರಂದು ಮಧ್ಯಾಹಃ 4:30 ಗಂಟೆಗೆ ಜ್ಯೋತಿನಗರ ಉಪವಿಭಾಗದಲ್ಲಿ ಶ್ರೀ ಶ್ರೀನಾಥ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕಛೇರಿ), ನ.ರಾ.ಮೊಹಲ್ಲಾ ವಿಭಾಗ, ಸೆಸ್ಕ್, ಮೈಸೂರು ರವರ ಅಧ್ಯಕ್ಷತೆಯಲ್ಲಿ ಜನಸಂಪರ್ಕಸಭೆ ನಡೆಸಲಾಗಿರುತ್ತದೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ ಗ್ರಾಹಕರ ವಿವರ**

| ಕ್ರ.ಸಂ. | ಅಧಿಕಾರಿ/ನೌಕರನ ಹೆಸರು | ಪದನಾಮ | ಉಪವಿಭಾಗ/ ಶಾಖೆಯ ಹೆಸರು |
|---|---|---|---|
| 1 | ನಂದೀಶ್ ಎಂ.ಎಸ್ | ಸ.ಕಾ.ನಿ.ಇಂ(ವಿ) | ಜ್ಯೋತಿನಗರ ಉಪವಿಭಾಗ |
| 2 | ಯಾಲಕ್ಕಯ್ಯ | ಪ್ರಭಾರ ಸ.ಲೆ.ಅ | ಜ್ಯೋತಿನಗರ ಉಪವಿಭಾಗ |
| 3 | ಜಮೀರ್ ಪಾಷ | ಸ.ಇಂ.(ತಾಂ) | ಜ್ಯೋತಿನಗರ ಉಪವಿಭಾಗ |
| 4 | ಕಿರಣ್ | ಸ.ಇಂ.(ವಿ) | ಜ್ಯೋತಿನಗರ ಶಾಖೆ |
| 5 | ಸ್ವಾಮಿ.ಸಿ | ಸ.ಇಂ.(ವಿ) | ಉದಯಗಿರಿ ಶಾಖೆ |
| 6 | ತಿಮ್ಮರಾಜು ಕೆ.ಟಿ | ಕಿ.ಇಂ.(ವಿ) | ಉದಯಗಿರಿ ಶಾಖೆ |
| 7 | ಉಮೇಶ. ಜಿ | ಕಿ.ಇಂ.(ವಿ) | ಶಾಂತಿನಗರ ಶಾಖೆ |
| 8 | ಸಂದೀಪ್ | – | ಗ್ರಾಹಕರು |
| 9 | ಕೇಶವನಾಥ್‌ರಾವ್ | – | ಗ್ರಾಹಕರು |
| 10 | ಅಶ್ವಥ್‌ನಾರಾಯಣ | – | ಗ್ರಾಹಕರು |
| 11 | ಎಂ.ಡಿ. ರಫೀಖ್ | – | ಗ್ರಾಹಕರು |

AEE(O)
7/6

ಅಇಂ(ವಿ) ಕಛೇರಿ
ಚಾ.ವಿ.ಸ.ನಿ.ನಿ.

7 JUN
1370

Scanned by CamScanner

**ಸಭೆಯಲ್ಲಿ ಚರ್ಚಿಸಿದ ವಿಷಯಗಳು ಈ ಕೆಳಕಂಡಂತಿವೆ.**

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನ.ರಾ.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ.,ಮೈಸೂರು ರವರು ಜನಸಂಪರ್ಕ ಸಭೆಗೆ ಎಲ್ಲರನ್ನೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಸಭೆಗೆ ಆಗಮಿಸಿದ ಗ್ರಾಹಕರುಗಳ ಮನವಿಗೆ ಈ ಕೆಳಕಂಡಂತೆ ಉತ್ತರಿಸಲಾಗಿರುತ್ತದೆ.

| | | | |
|---|---|---|---|
| 1 | ಸಂದೀಪ್,<br>#38,<br>ಚಾಮುಂಡಿವಿಹಾರ್ ಬಡಾವಣೆ,<br>ಮೈಸೂರು.<br><br>ಮೊ :9986391866 | ತಮ್ಮ ಮನೆಯ ಮುಂಭಾಗದಲ್ಲಿರುವ 250ಕೆ.ವಿ.ಎ. ಪರಿವರ್ತಕವನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಇಲಾಖೆಯಿಂದ ಮಂಜೂರಾತಿ ನೀಡಲಾಗಿದ್ದು ನಂತರ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕೆಂದು ಇಲಾಖೆಯಿಂದಲೇ ಬರೆದಿರುವ ಪತ್ರದ ಬಗ್ಗೆ ವಿವರಣೆ ಕೋರಿರುತ್ತಾರೆ. | ಈ ವಿಷಯವಾಗಿ ಸ.ಕಾ.ನಿ.ಇಂ(ವಿ),ಜ್ಯೋತಿನಗರ ಉಪವಿಭಾಗ ರವರು ಮಾತನಾಡಿ ಸದರಿ ಕಾಮಗಾರಿಯ ಮಂಜೂರಾತಿ ನೀಡಿದ ನಂತರ ಶ್ರೀ ಎಂ.ಶಂಕರ್, ಕಾರ್ಯದರ್ಶಿ, ಚಾಮುಂಡಿವಿಹಾರ್ ಬಡಾವಣೆ ರವರು 250ಕೆ.ವಿ.ಎ. ಪರಿವರ್ತಕವನ್ನು ಸ್ಥಳಾಂತರಿಸಬಾರದೆಂದು ತಕರಾರು ಅರ್ಜಿಯನ್ನು ಸಲ್ಲಿಸಿದ್ದರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕೆಂದು ಇಲಾಖೆಯಿಂದ ಪತ್ರ ಬರೆಯಿಲಾಯಿತೆಂದು ತಿಳಿಸಿದರು. ನಂತರ ಅರ್ಜಿದಾರರಾದ ಸಂದೀಪ್ ರವರು ತಕರಾರು ಅರ್ಜಿ ಸಲ್ಲಿಸಿರುವವರು ಬಡಾವಣೆಯ ಸ್ಥಳೀಯರಲ್ಲವೆಂದು ಮನವರಿಕೆ ಮಾಡಿದ ನಂತರ ಸಭಾಧ್ಯಕ್ಷರು ವಿಷಯವನ್ನು ಮತ್ತೊಮ್ಮೆ ಪರಿಶೀಲಿಸಿ ಸಮಸ್ಯೆ ಬಗೆಹರಿಸಿಕೊಡುವಂತೆ ಸ.ಕಾ.ನಿ.ಇಂ(ವಿ),ಜ್ಯೋತಿನಗರ ರವರಿಗೆ ಸೂಚಿಸಿದರು. |
| 2 | ಕೇಶವನಾಥ್‌ರಾವ್,<br>ಮಳಿಗೆ ನಂ–7,<br>ಗಾಯತ್ರಿಪುರಂ ಮುಖ್ಯರಸ್ತೆ,<br>ಮೈಸೂರು.<br><br>ಮೊ :9845110185 | ಸ್ಥಾವರ ಸಂಖ್ಯೆ : JJC10200 ಗೆ ಸೆಸ್ಕ್ ಜಾಗೃತದಳದಿಂದ ವಿದ್ಯುತ್ ಕಳ್ಳತನದ ಪ್ರಕರಣವನ್ನು ದಾಖಲಿಸಿ ರೂ.7275/– ಗಳ ದಂಡ ವಿಧಿಸಲಾಗಿದ್ದು, ಹಣವನ್ನು ಜ್ಯೋತಿನಗರ ಉಪವಿಭಾಗದಲ್ಲಿ ಕಟ್ಟಿಸಿಕೊಳ್ಳುತ್ತಿಲ್ಲವೆಂದು, ಇದರಿಂದ ಮೀಟರ್ ಮರುಪಡೆಯಲು ಸಾಧ್ಯವಾಗುತ್ತಿಲ್ಲವೆಂದು ದೂರಿರುತ್ತಾರೆ. | ಈ ವಿಷಯವಾಗಿ ಸ.ಕಾ.ನಿ.ಇಂ(ವಿ),ಜ್ಯೋತಿನಗರ ಉಪವಿಭಾಗ ರವರು ಮಾತನಾಡಿ ನಮ್ಮ ಉಪವಿಭಾಗದ ರೌಟರ್ ಸುಟ್ಟುಹೋಗಿದ್ದು ಸರ್ವರ್ ಇಲ್ಲದಿರುವುದರಿಂದ ಹಣಕಟ್ಟಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸುತ್ತಾ ಹಣವನ್ನು ಕೇಂದ್ರ ಉಪವಿಭಾಗದಲ್ಲಿ ಪಾವತಿಸುವಂತೆ ಸೂಚಿಸಿರುತ್ತಾರೆ. |
| 3 | ಅಶ್ವಥ್‌ನಾರಾಯಣ<br>ಹಿಂದುಸ್ಥಾನ್ ಎಲೆಕ್ಟ್ರಿಕಲ್ಸ್,<br>ಶಿವರಾಂಪೇಟೆ,<br>ಮೈಸೂರು | 1. ತಾತ್ಕಾಲಿಕ ಸ್ಥಾವರ ಸಂಖ್ಯೆ : STPS-202ರ ಬಿಲ್ಲಿನಲ್ಲಿ ಡಿಮ್ಯಾಂಡ್ ಮಾಡಲಾಗಿರುವ BMD ಯವಿವರಣೆ ಕೋರಿರುತ್ತಾರೆ. | 1. ಸ.ಕಾ.ನಿ.ಇಂ(ವಿ),ಜ್ಯೋತಿನಗರ ಉಪವಿಭಾಗ ರವರು ಮಾತನಾಡಿ ಸದರಿ ಬಿಲ್ಲಿನ BMD ವಿವರಣೆ ನೀಡುವಂತೆ ಸಹಾಯಕ ಲೆಕ್ಕಾಧಿಕಾರಿಯವರಿಗೆ ಸೂಚಿಸಿರುತ್ತಾರೆ. |

Scanned by CamScanner

| | | | |
|---|---|---|---|
| | ಮೊ : 9449833792 | 2. ಮಾನಸಿನಗರದಲ್ಲಿರುವ ತಾತ್ಕಾಲಿಕ ಸ್ಥಾವರಗಳ ಬಿಲ್ಲುಗಳಲ್ಲಿ BMD ಯನ್ನು ಸರಿಯಾಗಿ ವಿಧಿಸುತ್ತಿಲ್ಲವೆಂದು ದೂರಿರುತ್ತಾರೆ.<br><br>3. ರಾಜೀವನಗರದಲ್ಲಿರುವ ಪೋಸ್ಟಲ್ ಬಡಾವಣೆಯ ಮನೆಗಳಿಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡಲಾಗುತ್ತಿದ್ದು ಇಲಾಖೆಯ ವತಿಯಿಂದ ತಾತ್ಕಾಲಿಕ ವಿದ್ಯುತ್ ಸರಬರಾಜನ್ನು ಸ್ಥಗಿತಗೊಳಿಸುತ್ತೇವೆಂದು ಪದೇ ಪದೇ ಹೇಳಿಕೆ ನೀಡುತ್ತಿರುವುದರಿಂದ ಕೆ.ಇ.ಆರ್.ಸಿ.ಯ ಮಾರ್ಚ್ 2008, ರೂಲ್ ನಂಬರ್ 9 ರ ಪ್ರಕಾರ ವಿದ್ಯುತ್ ಸರಬರಾಜನ್ನು ಸ್ಥಗಿತಗೊಳಿಸಬಾರದೆಂದು ಕೋರಿರುತ್ತಾರೆ. | 2. ಸ.ಕಾ.ನಿ.ಇಂ(ವಿ),ಜ್ಯೋತಿನಗರ ಉಪವಿಭಾಗ ರವರು ಮಾತನಾಡಿ ಸದರಿ ಬಡಾವಣೆಯ ತಾತ್ಕಾಲಿಕ ಸ್ಥಾವರಗಳ ಸ್ಥಳ ಪರಿಶೀಲನೆ ಮಾಡಿ ಬಿಲ್ಲಿನಲ್ಲಿ BMD ಯನ್ನು ಸರಿಯಾಗಿ ವಿಧಿಸುವಂತೆ ಜ್ಯೋತಿನಗರದ ಶಾಖಾಧಿಕಾರಿಯವರಿಗೆ ಸೂಚಿಸಿರುತ್ತಾರೆ.<br><br>3. ಸ.ಕಾ.ನಿ.ಇಂ(ವಿ),ಜ್ಯೋತಿನಗರ ಉಪವಿಭಾಗ ರವರು ಮಾತನಾಡಿ ಸದರಿ ಬಡಾವಣೆಯ ಮನೆಗಳಿಗೆ ಕಟ್ಟಡವನ್ನು ನಿರ್ಮಿಸಲು ಮಾತ್ರ ತಾತ್ಕಾಲಿಕ ವಿದ್ಯುತ್ ಸಂಪರ್ಕ ನೀಡಲಾಗಿರುತ್ತದೆ. ಆದರೆ ಬಡಾವಣೆಯು ವಿದ್ಯುದ್ದೀಕರಣಗೊಂಡಿಲ್ಲವಾದ್ದರಿಂದ ಅಲ್ಲಿನ ನಿವಾಸಿಗಳು ಗೃಹಬಳಕೆಗೆ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಬಳಸುತ್ತಿದ್ದು ಇದರಿಂದ ಪರಿವರ್ತಕಕ್ಕೆ ಅಧಿಕ ಹೊರೆಯಾಗುತ್ತಿದ್ದು ಪರಿವರ್ತಕ ಪದೇ ಪದೇ ವಿಫಲವಾಗುತ್ತಿರುವುದರಿಂದ ತಾತ್ಕಾಲಿಕ ವಿದ್ಯುತ್ ಸರಬರಾಜನ್ನು ಸ್ಥಗಿತಗೊಳಿಸುತ್ತೇವೆಂದು ಹೇಳಿಕೆ ನೀಡುತ್ತಿರುವುದಾಗಿ ತಿಳಿಸುತ್ತಾ ಸಾಧ್ಯವಾದಷ್ಟು ಬೇಗ ಬಡಾವಣೆಯನ್ನು ವಿದ್ಯುದ್ದೀಕರಣಗೊಳಿಸಿಕೊಳ್ಳಬೇಕೆಂದು ವಿವರಿಸಿರುತ್ತಾರೆ. |
| 4 | ಎಂ.ಡಿ. ರಫೀಖ್, ಉಸ್ಮಾನಿಯಾ ಬ್ಲಾಕ್, ಮೈಸೂರು.<br><br>ಮೊ :9945373533 | ಸ್ಥಾವರ ಸಂಖ್ಯೆ : NJL33928 ಗೆ ದಿನಾಂಕ :21.05.2018ರಂದು ವಿದ್ಯುತ್‌ಬಾಕಿ ಪಾವತಿ ಮಾಡದಿರುವ ಕಾರಣಕ್ಕೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗಿದ್ದು ನಂತರ 23.05.2018ರಂದು ವಿದ್ಯುತ್‌ಬಾಕಿ ಪಾವತಿ ಮಾಡಿ ಕಿರಿಯ ಇಂಜಿನಿಯರ್(ವಿ) ರವರ ಗಮನಕ್ಕೆ ತಂದನಂತರ 3 ದಿನಗಳು ಕಳೆದರೂ ಸಹ ವಿದ್ಯುತ್ ಮರುಸಂಪರ್ಕ ನೀಡಿರುವುದಿಲ್ಲವೆಂದು ದೂರಿರುತ್ತಾರೆ. | ಈ ವಿಷಯವಾಗಿ ಕಿರಿಯ ಇಂಜಿನಿಯರ್(ವಿ), ಶಾಂತಿನಗರ ಶಾಖೆಯವರು ಮಾತನಾಡಿ ದಿನಾಂಕ :23.05.2018 ಹಾಗೂ 24.05.2018 ರಂದು ರಭಸ ಗಾಳಿ ಸಹಿತ ಭಾರಿ ಮಳೆಯಾದ್ದರಿಂದ ಮಾರ್ಗದೋಷಗಳು ಹೆಚ್ಚಾಗಿ ಸಂಭವಿಸಿದ್ದು ಸದರಿ ಸ್ಥಾವರ ಸಂಖ್ಯೆಗೆ ವಿದ್ಯುತ್ ಮರುಸಂಪರ್ಕ ನೀಡಲು ಸಾಧ್ಯವಾಗಲಿಲ್ಲವೆಂದೂ ಹಾಗೂ ದಿನಾಂಕ :25.05.2018ರಂದು ವಿದ್ಯುತ್ ಮರುಸಂಪರ್ಕ ನೀಡಲಾಗಿದೆಯೆಂದು ತಿಳಿಸಿದರು. ನಂತರ ದೂರುದಾರರು ಮೊಬೈಲ್ ದೂರವಾಣಿಯ ಮುಖಾಂತರ ಮನೆಯವರನ್ನು ಸಂಪರ್ಕಿಸಿ ವಿದ್ಯುತ್ ಮರುಸಂಪರ್ಕ ನೀಡಿರುವ ಬಗ್ಗೆ ಖಚಿತಪಡಿಸಿಕೊಂಡರು. |

ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಸಭಾಧ್ಯಕ್ಷರು ವಂದನೆಯನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

Scanned by CamScanner